**ಅ. ದಾ. ಸಂ. ಃ 263/ 2003**
**ಪಿ .ಡಬ್ಲ್ಯೂ ಃ 01**

**ದಿನಾಂಕ ಃ 08-11-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು ಃ- ಪ್ರತಿವಾದಿಯ** ಪರ ಶ್ರೀ.? ಆರ್. ಕೆ. ವಕೀಲರಿಂದ ಃ-

ನಿಪಿ-1 ಮತ್ತು 2 ಲಿಖಿತ ದಾಖಲಾತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಅದು ನನ್ನ ತಂದೆಯಿಂದ ತಾಯಿಯವರಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ತಾತನಿಗಾಗಲೀ ನಿಮ್ಮ ತಂದೆಗಾಗಲೀ ಲಿಖಿತ ದಾಖಲಾತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನೀವು ನ್ಯಾಯಾಲಯಕ್ಕೆ ಯಾವ ದಾಖಲಾತಿಯನ್ನು ನೀಡಿಲ್ಲ ಎಂದರೆ ನಾನು ನನ್ನ ತಾಯಿಯವರ ಹೆಸರಿಗೆ ಆಗಿರುವ ಖಾತೆ ಕಂದಾಯ ರಸೀದಿಗಳನ್ನು ನೀಡಿರುತ್ತೇನೆ. ನಿಮ್ಮ ತಂದೆಯವರ ಹೆಸರಿಗೆ ಮತ್ತು ತಾಯಿಯವರ ಹೆಸರಿಗೆ ಪಂಚಾಯಿತಿಯಲ್ಲಿ ಆಗಿರುವ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಪಂಚಾಯಿತಿಯಿಂದ ನಮ್ಮ ಮುತ್ತಾತನಿಗೆ ಆಗಿರುತ್ತದೆ ನಂತರ ನಮ್ಮ ತಾತನಿಗೆ ನಂತರ ನನ್ನ ತಂದೆಗೆ ಆನಂತರ ನನ್ನ ತಾಯಿಯವರಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಇವೆಲ್ಲವೂ ಸಹ ಸೃಷ್ಟಿಸಿರುವ ದಾಖಲಾತಿಗಳು ಎಂದರೆ ಸಾಕ್ಷಿಯು 1956 ರಿಂದ ಹೇಗೆ ಸೃಷ್ಟಿಸಲು ಸಾಧ್ಯವಾಗುತ್ತದೆ ಎಂದು ನುಡಿಯುತ್ತಾರೆ. ನಿಪಿ-7 ಮತ್ತು 8 ರಲ್ಲಿ ಕಿಟಕಿ ಇದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-7 ಮತ್ತು 8 ರಲ್ಲಿ ಹಂಚಿನ ಮನೆ ಇರುತ್ತದೆ ಎಂದರೆ ಸರಿ. ನಿಮ್ಮ ತಂದೆಯವರು ಅಸಲು ದಾವಾ ಸಂ.13/93 ರಂತೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಆದು ಸಹ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಎಂದರೆ ಸರಿ. ಆ ದಾವೆ 12-03-2003 ರಲ್ಲಿ ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ರಾಜಿ ಆಗುತ್ತೇನೆ ಎಂದು ಹೇಳಿದ್ದರು. ಆಗಾಗಿ ನಾವು ದಾವೆಗೆ

ಬಂದಿರುವುದಿಲ್ಲ. ರಾಜಿ ಆಗಿರುವುದಕ್ಕೆ ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 2003 ರ ನಂತರ ಈ ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿ. ಆ ದಾವೆಯಲ್ಲಿ ತಾತ್ಕಾಲಿಕ ತಡೆ ಆಜ್ಞೆ ಇತ್ತು ಎಂದರೆ ಸರಿ. ಆ ತಾತ್ಕಾಲಿಕ ತಡೆ ಆಜ್ಞೆಯನ್ನು ಉಪಯೋಗಿಸಿಕೊಂಡು ನೀವು ನಿಪಿ-1 ರಿಂದ 11 ರನ್ನು ಸೃಷ್ಟಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ತಡೆಯಾಜ್ಞೆಯನ್ನು ದುರುಪಯೋಗಪಡಿಸಿಕೊಂಡು ಎಲ್ಲಾ ದಾಖಲಾತಿಗಳನ್ನು ಪಂಚಾಯಿತಿಯಿಂದ ಸೃಷ್ಟಿಸಿರುತ್ತೀರಿ ಎಂದರೆ ಸರಿಯಲ್ಲ. ಆ ದಾವೆ ವಿಚಾರಣೆಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ-16 ನ್ನು ನೀವೇ ನೀಡಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ವಿಚಾರಣೆ ಆದರೆ ಸತ್ಯಾಂಶ ತಿಳಿಯುತ್ತದೆ ಎಂದರೆ ಅದು ವಜಾ ಆದ ಮೇಲೆ ಹೊಸ ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನೀವು ವಾದಪತ್ರ ತಿದ್ದುಪಡಿಗೆ ಒಂದು ಆರ್ಜಿಯನ್ನು ಹಾಕಿರುತ್ತೀರಿ ಎಂದರೆ ಸರಿ. ಅದರಲ್ಲಿ ನಾವೇ ಮಾಲೀಕರು ಮತ್ತು ಪ್ರತಿವಾದಿಗಳಿಂದ ಸ್ವಾಧೀನವನ್ನು ಕೊಡಿಸಿ ಎಂದು ಅರ್ಜಿ ಹಾಕಿರುತ್ತೀರಿ ಎಂದರೆ ಸರಿ. ತಂಟೆ ತಕರಾರು ಮಾಡುತ್ತಿದ್ದರು ಅದಕ್ಕಾಗಿ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಆ ಅರ್ಜಿಯು ವಜಾ ಆಗಿರುತ್ತದೆ ಎಂದರೆ ಸರಿ. ನೀವು ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದೀರಿ ಎಂದರೆ ಸರಿ. ಅದು ದಿನಾಂಕ 17-01-2022 ರಂದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ತಿಳಿದುಕೊಂಡು ಬಂದು ಹೇಳುವುದಕ್ಕೆ ನನಗೆ ಆಗುವುದಿಲ್ಲ. ನೀವು ಉಚ್ಚ ನ್ಯಾಯಾಲಯದ ಆದೇಶದ ಪ್ರತಿಯನ್ನು ತೆಗೆದುಕೊಂಡಿರುತ್ತೀರಿ ಎಂದರೆ ಇಲ್ಲ ನಮ್ಮ ವಕೀಲರು ತೆಗೆದುಕೊಂಡಿರಬಹುದು ಎಂದು ನುಡಿಯುತ್ತಾರೆ. ನೀವು ನಿಮ್ಮ ವಕೀಲರನ್ನು ವಿಚಾರಿಸಿ ಆದೇಶ ಪ್ರತಿಯನ್ನು ಕೊಡಲು ಆಗುತ್ತದಾ ಎಂದರೆ

ಇಲ್ಲ ಎಂದು ನುಡಿಯುತ್ತಾರೆ. ನೀವು ತಿದ್ದುಪಡಿ ಅರ್ಜಿ ಉಚ್ಚ ನ್ಯಾಯಾಲಯದಲ್ಲಿ ವಜಾ ಆಗಿರುವುದರಿಂದ ಆದ ಅದರ ಪ್ರತಿಯನ್ನು ನೀಡಿದರೆ ಈ ದಾವೆಯು ವಜಾ ಆಗುತ್ತದೆ ಎಂದು ನೀಡುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಮ್ಮಹತ್ತಿರ ಆದೇಶದ ಪ್ರತಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-14 ನ್ನು ನೀವು ನ್ಯಾಯಾಲಯಕ್ಕೆ ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-14 ಲ್ಲಿ ಏನು ಇದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ-14 ರಲ್ಲಿ ಉತ್ತರಕ್ಕೆ ಗುಡೇನ್ ಸಾಬ್ ಅಂಗಡಿ ಮತ್ತು ಮನೆ ಎಂದು ಬರೆದಿದೆ ಎಂದರೆ ಸರಿ. ಗುಡೇನ್ ಸಾಬ್ ರವರಿಂದ ನಿಮ್ಮ ತಾತನಿಗಾಲೀ ನಿಮ್ಮ ತಂದೆಗಾಗಲೀ ಯಾವುದೇ ನೋಂದಣಿ ಪತ್ರ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಪತ್ರಗಳೆನ್ನೆಲ್ಲಾ ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ಗುಡೇಸ್ ಸಾಬ್ ಆಸ್ತಿಗೂ ಮತ್ತು ನಿಮಗೂ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು 1953 ರಿಂದ ನಾವೇ ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ಗುಡೇನ್ ಸಾಬ್ ಆಸ್ತಿಯಲ್ಲಿ ನೀವು ಸ್ವಾ ಧೀನದಲ್ಲಿ ಇದ್ದೀರಾ ಎಂದರೆ ಗುಡೇನ್ ಸಾಬ್ ಆಸ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತು ರಸ್ತೆ ಅಗಲೀಕರಣಕ್ಕಾಗಿ ಅಳತೆ ಆಗಿರುತ್ತದೆ ಎಂದರೆ ಆಗಿರಬಹುದು ಎಂದು ನುಡಿಯುತ್ತಾರೆ. ಕೆಲವರು ಪರಿಹಾರ ಹಣವನ್ನು ಸಹ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಯಾರೂ ಹಣವನ್ನು ತೆಗೆದುಕೊಂಡಿಲ್ಲವಾ ಎಂದರೆ ನನಗೆ ಗೊತ್ತಿಲ್ಲ. ಗುಡೇನ್ ಸಾಬ್ ವಂಶಸ್ಥರು ಪರಿಹಾರ ಹಣವನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನೀವೇದರೂ ಅರ್ಜಿಯನ್ನು ಕೊಟ್ಟಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮಗೂ ಮತ್ತು ದಾವಾಸ್ವತ್ತಿಗೂ ಸಂಬಂಧವೇ ಇಲ್ಲದೇ ಇರುವುದರಿಂದ ನಿಮಗೆ ನೋಟಿಸ್

ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾ ಧೀನದಲ್ಲಿ ನೀವಾಗಲೀ ನಿಮ್ಮ ತಂದೆಯವರಾಗಲೀ ಇರುವುದಿಲ್ಲ ಎಂದರೆ ನಾವೇ ಇರುತ್ತೇವೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ದಾಖಲಾತಿಗಳು ನಿಮ್ಮ ತಾಯಿಯವರ ಹೆಸರಿನಲ್ಲಿ ಇದೆ ಎಂದು ದಾವೆಯನ್ನು ಹೂಡಿದ್ದೀರಿ ಆದರೆ ನಿಮ್ಮ ತಾಯಿಯವರು ಯಾವುದೇ ದಾವೆಯನ್ನು ಹೂಡಿಲ್ಲ ಎಂದರೆ ನಮ್ಮ ತಾಯಿಯವರು ನನಗೆ ಹೇಳಿ ದಾವೆಯನ್ನು ಹೂಡಿಸಿರುತ್ತಾರೆ. ನಿಮ್ಮ ತಾಯಿಯವರು ನಿಮಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿ. ದಾವಾಸ್ವತ್ತು ನಿಮ್ಮ ತಾಯಿಯವರ ಹೆಸರಿನಲ್ಲಿ ಇಲ್ಲ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮೊದಲಿನಿಂದಲೂ ಸಹ ಅವರೇ ಸಹ ದಾವಾಸ್ವತ್ತಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**